
# ಧಾಡಸಿತನದ ದಂಡನಾಯಕ



■ ಪ್ರವೀಣ ಕುಲಕರ್ಣಿ

ಭಾರತೀಯ ಸೇನಾ ಪಡೆಗಳ ಮುಖ್ಯಸ್ಥರಾಗಿ (ಸಿಡಿಎಸ್) ದೇಶದ ಪೂರ್ವ ಹಾಗೂ ಉತ್ತರ ಭಾಗಗಳ ಎಲ್ಲ ಗಡಿಗಳಿಗೆ ಪಾದರಸದಂತೆ ಓಡಾಡುತ್ತಾ, ಮಿಲಿಟರಿ ವ್ಯವಸ್ಥೆಯಲ್ಲಿ ಆಗಬೇಕಿರುವ ಬದಲಾವಣೆಗಳ ಕುರಿತು ಚಿಂತಿಸುತ್ತಾ, ಯಾವುದೇ ಹಿಂಜರಿಕೆ ಇಲ್ಲದೆ ಖಡಕ್ ಸಂದೇಶಗಳನ್ನೂ ನೀಡುತ್ತಿದ್ದ ಜನರಲ್ ಬಿಪಿನ್ ಲಕ್ಷ್ಮಣ ಸಿಂಗ್ ರಾವತ್ ಈಗಿಲ್ಲ. ತಮಿಳುನಾಡಿನ ಕೂನೂರು ಬಳಿ ಸಂಭವಿಸಿದ ಹೆಲಿಕಾಪ್ಟರ್ ಅವಘಡದಲ್ಲಿ ಅವರು ದುರ್ಮರಣಕ್ಕೆ ಈಡಾದುದ್ದನ್ನು ಈಗಲೂ ನಂಬಲಾಗುತ್ತಿಲ್ಲ.

ಸೇನೆಯ ಸಂಯೋಜನೆಯಲ್ಲಿ ಆಮೂಲಾಗ್ರ ಬದಲಾವಣೆ ತರಲು ಹಾತೊರೆಯುತ್ತಿದ್ದ ಈ ದಂಡನಾಯಕ, ವ್ಯವಸ್ಥೆಯ ಒಳಗಿನಿಂದಲೇ ವಿರೋಧ ವ್ಯಕ್ತವಾದರೂ ಹಲವು ಸುಧಾರಣಾ ಕ್ರಮಗಳಿಗಾಗಿ ಮುಂದಿಟ್ಟ ಹೆಜ್ಜೆಯನ್ನು ಹಿಂತೆಗೆಯದ ಮುಖ್ಯಸ್ಥರಾಗಿದ್ದವರು. ಮೂರೂ ಸೇನಾ ಪಡೆಗಳಲ್ಲಿ ಈಗ ಒಟ್ಟಾರೆ 17 ಸ್ವತಂತ್ರ ಕಮಾಂಡ್‌ಗಳಿವೆ. ಅವುಗಳನ್ನು ಐದು ಕಮಾಂಡ್‌ಗಳಾಗಿ ಮರು ಸಂಯೋಜಿಸುವ ಕನಸನ್ನೂ ರಾವತ್ ಕಂಡಿದ್ದರು. ವಾಯುಪಡೆ ನೇತೃತ್ವದಲ್ಲಿ ಏರ್ ಡಿಫೆನ್ಸ್ ಕಮಾಂಡ್, ನೌಕಾಪಡೆ ನೇತೃತ್ವದಲ್ಲಿ ಮೆರಿಟೈಮ್ ಕಮಾಂಡ್ ಹಾಗೂ ಸೇನೆಯ ನೇತೃತ್ವದಲ್ಲಿ ಮೂರು ಭೂಸೇನಾ ಕಮಾಂಡ್‌ಗಳನ್ನು (ಪೂರ್ವ, ಉತ್ತರ ಹಾಗೂ ಪಶ್ಚಿಮ) ಸೃಜಿಸುವುದು ಅವರ ಉದ್ದೇಶವಾಗಿತ್ತು. ಎಲ್ಲ ಕಮಾಂಡ್‌ಗಳಲ್ಲಿಯೂ ಮೂರೂ ಸೇನಾ ಪಡೆಗಳು ಇರುವಂತೆ ನೋಡಿಕೊಳ್ಳುವ ಪ್ರಸ್ತಾವವನ್ನು ಅವರು ಮುಂದಿಟ್ಟಿದ್ದರು. ಸ್ವತಂತ್ರ ಭಾರತದ ಮಟ್ಟಿಗೆ ಇದೊಂದು ಬಲುದೊಡ್ಡ ರಕ್ಷಣಾ ಸುಧಾರಣಾ ಕ್ರಮ. ರಾವತ್ ಅವರ ಈ ತಂತ್ರವನ್ನು ಸರ್ಕಾರ ಒಪ್ಪಿಕೊಂಡಿದ್ದು, ಸುಧಾರಣೆ ಕ್ರಮಗಳು ಇನ್ನೇನು ಶುರುವಾಗಲಿದ್ದವು.

ರಕ್ಷಣಾ ತಂತ್ರದಲ್ಲಿ ಪಳಗಿದ ಸೇನಾಧಿಕಾರಿಯಾಗಿದ್ದರು ರಾವತ್. ಸದಾ ಸಂಘರ್ಷಮಯ ಸನ್ನಿವೇಶಗಳಿಂದ ಕೂಡಿರುತ್ತಿದ್ದ ಪೂರ್ವ ಹಾಗೂ ಉತ್ತರ ಕಮಾಂಡ್‌ಗಳಲ್ಲಿಯೂ ಅವರು ಸೇವೆ ಸಲ್ಲಿಸಿದ್ದರು. ಮ್ಯಾನ್ಮಾರ್‌ನ ಅರಣ್ಯದಲ್ಲಿ ಅಡಗಿದ್ದ ಉಗ್ರರ ದಮನಕ್ಕಾಗಿ ನಡೆಸಿದ ಸರ್ಜಿಕಲ್ ಸ್ಟ್ರೈಕ್‌ನ ನೇತೃತ್ವವನ್ನು ಅವರೇ ವಹಿಸಿದ್ದರು. ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರರ ನಿಗ್ರಹಕ್ಕೆ ನಡೆದ ಹಲವು ಕಾರ್ಯಾಚರಣೆಗಳಲ್ಲಿ ಅವರ ಪ್ರಭಾವವಿತ್ತು. ಪರಿಣಾಮಗಳನ್ನು ಲೆಕ್ಕಿಸದೆ, ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಸ್ಥಳದಲ್ಲೇ ನಿರ್ಧಾರಗಳನ್ನು ಕೈಗೊಳ್ಳುವ ದಿಟ್ಟತನವನ್ನೂ ಅವರು ಪ್ರದರ್ಶಿಸುತ್ತಿದ್ದರು. ಚೀನಾ ಹಾಗೂ ಪಾಕಿಸ್ತಾನದ ಜತೆಗಿನ ಗಡಿ ಸಂಘರ್ಷವನ್ನು ನಿಭಾಯಿಸುವ ವಿಷಯದಲ್ಲಿ ಮೂರೂವರೆ ದಶಕಗಳ ಅನುಭವ ಅವರಿಗಿತ್ತು. ರಾವತ್ ಅವರಿಗೆ ಈ ದಿಟ್ಟತನ ರಕ್ತಗತವಾಗಿಯೇ ಬಂದಂತಿದೆ. ಏಕೆಂದರೆ, ಅವರ ಕುಟುಂಬದ ಹಲವು ಪೀಳಿಗೆಗಳು ಸೇನೆಯ ಸೇವೆಯಲ್ಲೇ ಬದುಕನ್ನು ಸವೆಸಿವೆ. ಅವರ ತಂದೆ ಲಕ್ಷ್ಮಣಸಿಂಗ್ ಸಹ ಸೇನೆಯಲ್ಲಿ ಲೆಫ್ಟಿನಂಟ್ ಜನರಲ್ ಆಗಿ ಕಾರ್ಯ ನಿರ್ವಹಿಸಿದ್ದರು.

ಹಿಂದು–ಮುಂದು ನೋಡದೆ ಕೈಗೊಳ್ಳುತ್ತಿದ್ದ ನಿರ್ಧಾರಗಳಿಂದ ಹಾಗೂ ಆಡುತ್ತಿದ್ದ ಮಾತುಗಳಿಂದ ವಿವಾದಕ್ಕೂ ಒಳಗಾದವರು ಅವರು. ಭಾರತದ ರಾಜಕೀಯ ನಾಯಕತ್ವ ಪಾಕಿಸ್ತಾನದ ಎದುರು 'ಬಲ ಪ್ರದರ್ಶನ'ದ ಉಮೇದಿ ತೋರುತ್ತಿದ್ದ ಹೊತ್ತಿನಲ್ಲೇ ರಾವತ್ ಅವರು ದೇಶದ ಮೊದಲ ಸಿಡಿಎಸ್ ಆಗಿ ನೇಮಕಗೊಂಡಿದ್ದು ಕಾಕತಾಳೀಯ. ಸೈನಿಕರಾದವರು ಹೆಚ್ಚು ಮಾತನಾಡಲು ಹೋಗಬಾರದು ಎನ್ನುವ ಸಾಂಪ್ರದಾಯಿಕ ಶಿಸ್ತನ್ನು ಮುರಿದವರೂ ಈ ದಂಡನಾಯಕ. ಸೇನೆಯಲ್ಲಿ ಅತ್ಯುನ್ನತ ಹುದ್ದೆಯಲ್ಲಿದ್ದರೂ ತಮ್ಮ ಅಭಿಪ್ರಾಯವನ್ನು ಮುಕ್ತವಾಗಿ ಹಂಚಿಕೊಳ್ಳುವಲ್ಲಿ ಯಾವ ಹಿಂಜರಿಕೆಯನ್ನು ಅವರು ತೋರಿದವರಲ್ಲ.

'ಏಕಕಾಲಕ್ಕೆ ಚೀನಾ ಹಾಗೂ ಪಾಕಿಸ್ತಾನದ ಮೇಲೆ ಭಾರತ ಯುದ್ಧ ಮಾಡಬೇಕಾದ ಸನ್ನಿವೇಶವನ್ನು ತಳ್ಳಿಹಾಕಲಾಗದು' ಎಂದು ಅವರೊಮ್ಮೆ ಹೇಳಿದ್ದರು. ಪೌರತ್ವ ಕಾಯ್ದೆ ಜಾರಿಯನ್ನು ವಿರೋಧಿಸಿ ನಡೆದ ಪ್ರತಿಭಟನೆ ವಿರುದ್ಧವೂ ಅವರು ಹೇಳಿಕೆಯನ್ನು ನೀಡಿದ್ದರು. ವಾಯುಪಡೆಯನ್ನು ಭೂಸೇನೆಯ ಬೆಂಬಲಕ್ಕಿರುವ ಪಡೆ ಎಂದು ಅವರು ಕರೆದದ್ದೂ ವಿವಾದವಾಗಿತ್ತು. ಆದರೆ, ಅಂತಹ ವಿವಾದಗಳನ್ನೆಲ್ಲ ಅಲಕ್ಷಿಸಿ ಮುಂದೆ ಹೋಗುವ ಛಾತಿ ಅವರಲ್ಲಿತ್ತು.

ಉತ್ತರಾಖಂಡದ ಪೌರಿ ಜಿಲ್ಲೆಯ ರಜಪೂತ್ ಕುಟುಂಬಕ್ಕೆ ಸೇರಿದ ರಾವತ್, ಸೇನೆಯ ಹಲವು ಹುದ್ದೆಗಳನ್ನು ಅಲಂಕರಿಸಿದವರು. ಮೊನ್ನೆ ಭಾಷಣ ಮಾಡಲು ಹೊರಟಿದ್ದ ಅದೇ ವೆಲ್ಲಿಂಗ್ಟನ್‌ನ ಡಿಫೆನ್ಸ್ ಕಾಲೇಜಿನಲ್ಲಿ ಒಂದು ಕಾಲದಲ್ಲಿ ತರಬೇತಿಯನ್ನು ಪಡೆದವರು. ಗಿರಿಶ್ರೇಣಿಯಲ್ಲಿ ತಣ್ಣಗೆ ಪವಡಿಸಿರುವ ಈ ಕಾಲೇಜು, ತಾನೇ ಬೆಳೆಸಿದ ವಿದ್ಯಾರ್ಥಿ ಈಗ ಎಷ್ಟೊಂದು ಎತ್ತರಕ್ಕೆ ಬೆಳೆದು ಬಂದಿದ್ದಾನೆ ಎಂದು ನೋಡಿ ಬೆಚ್ಚಗಾಗುವ ಅದೃಷ್ಟ ಹೊಂದಿರಲಿಲ್ಲ. ಅಂದಹಾಗೆ, ರಾವತ್ ಅವರ ಪತ್ನಿ ಮಧುಲಿಕಾ ರಾಜಮನೆತನವೊಂದರ ರಾಜಕುಮಾರಿ ಆಗಿದ್ದವರು. ಮನಃಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರೆಯಾಗಿದ್ದರು. ಸೈನಿಕರ, ಅವರ ಕುಟುಂಬದ ಸದಸ್ಯರ ಕಲ್ಯಾಣಕ್ಕಾಗಿ ಈ ದಂಪತಿ ಸದಾ ಹಂಬಲಿಸುತ್ತಿದ್ದರು. ಹಲವು ಸೇವಾ ಚಟುವಟಿಕೆಗಳಲ್ಲೂ ಅವರು ಭಾಗಿಯಾಗುತ್ತಿದ್ದರು. ಈ ದಂಪತಿಗೆ ಇಬ್ಬರು ಪುತ್ರಿಯರಿದ್ದಾರೆ. ಅಪ್ಪ–ಅಮ್ಮನನ್ನು ಒಟ್ಟಿಗೇ ಕಳೆದುಕೊಂಡಿರುವ ಅವರೀಗ ದೇಶದ ಪುತ್ರಿಯರಾಗಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65